KATK010046322018

**ಮೊದಲನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು**

**ಸ್ಪೆಷಲ್ ಕೇಸ್ ನಂ. 384/2018**

| | | |
|---|---|---|
| ಹೆಸರು | ಗಿರೀಶ್. ಎಸ್.ಟಿ. | ಫ್ರಾಸಾ- 1 |
| ತಂದೆಯ ಹೆಸರು | ಕೆಂಪಯ್ಯ | ಚಾಸಾ- 1 |
| ವಯಸ್ಸು | 40 ವರ್ಷ | |
| ಉದ್ಯೋಗ | BESCOM ಎಇಇ, | |
| ವಾಸಸ್ಥಳ | ಯಡಿಯೂರು , ಕುಣಿಗಲ್ | |

ದಿನಾಂಕಃ 14-09-21 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದಃ-**

ನಾನು BESCOM ಜಾಗೃತ ದಳ ದಲ್ಲಿ 05-10-2016 ರಿಂದ 31-05-2017 ರವರೆಗೆ ತುಮಕೂರಿನಲ್ಲಿ ಕೆಲಸ ಮಾಡಿದ್ದೇನೆ. ದಿನಾಂಕ 02-03-2017 ರಂದು ತಿಪಟೂರು ತಾಲ್ಲೂಕು ಕೆರೆಗೋಡು ಗ್ರಾಮದ ಸತೀಶ್ ಎಂಬುವವರು ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಕೊಳವೆ ಬಾವಿಗೆ ತೆಗೆದುಕೊಂಡು ನೀರನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ನಾನು ಹೋಗಿ ನೋಡಿದಾಗ ಟ್ರಾಕ್ಟರ್ ನ ಟ್ಯಾಂಕರ್ ಗೆ ನೀರನ್ನು ತುಂಬುತ್ತಿ ದ್ದರು. ವಿದ್ಯುತ್ ನ್ನು ಎಲ್ಲಿಂದ ಪಡೆಯುತ್ತಿದ್ದಾರೆಂದು ಪರಿಶೀಲಿಸಿದೆನು. 7.5 ಹೆಚ್.ಪಿ. ಮೋಟರ್ ನ್ನು ಅಳವಡಿಸಿಕೊಂಡು ವಿದ್ಯುತ್ ನ್ನು ತೆಗೆದುಕೂಂಡು ನೀರನ್ನು ಟ್ಯಾಂಕರ್ ಗೆ ತುಂಬು ತ್ತಿದ್ದರು. ಮೀಟರ್ ನ್ನು ಅಳವಡಿಸಿರಲಿಲ್ಲ. ಸತೀಶ್ ರವರನ್ನು

ವಿಚಾರಿಸಿದಾಗ ಕುಡಿಯುವ ನೀರಿಗಾಗಿ ಬೇರೆ ಗ್ರಾಮಗಳಿಗೆ ಕೊಡುತ್ತಿದ್ದೇವೆಂದು ತಿಳಿಸಿದರು. ಅವರು ಮೀಟರ್ ನ್ನು ಅಳವಡಿಸದೇ ಇರುವ ಕಾರಣ ಸ್ಥಳದಲ್ಲಿ ಪಂಚನಾಮೆ ಮಾಡಿದೆನು. ನಂತರ ಮರುದಿನ ಬೆಳಿಗ್ಗೆ ದೂರನ್ನು ನೀಡಿದೆನು. ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಆರೋಪಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪರಿಶೀಲನಾ ವರದಿಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಫಿರ್ಯಾದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದಲ್ಲಿರುವ ಸತೀಶ್ ಕುಮಾರ್ ರವರೇ ಆ ದಿನ ಸ್ಥಳದಲ್ಲಿದ್ದರು.

**ಪಾಟೀ ಸವಾಲು: 2 ನೇ ಆರೋಪಿ ಪರ ವಕೀಲರಿಂದ -**

ಪಂಚನಾಮೆಗೆ ಸಾಕ್ಷಿದಾರರನ್ನು ಕರೆಯಲು ನೋಟೀಸನ್ನು ನೀಡಿರಲಿಲ್ಲ. 2 ನೇ ಆರೋಪಿಗೂ ಈ ಕೇಸಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸ.ನಂಬರ್ , ಆಸ್ತಿಯ ಬಗ್ಗೆ ನಾನು ವಿಚಾರ ಮಾಡಿಲ್ಲ. ನಾನು ಪಂಚನಾಮೆಯನ್ನು ಕಚೇರಿಯಲ್ಲಿಯೇ ಕುಳಿತು ಮಾಡಿದ್ದೇನೆ ಎಂದರೆ ಸರಿಯಲ್ಲ.

(1 ನೇ ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕಾಲಾವಕಾಶ ನೀಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು